ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	63
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರದವರು)
ಉತ್ತರಿಸಬೇಕಾದ ದಿನಾಂಕ	:	15.02.2022
ಉತ್ತರಿಸುವವರು	:	ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ವಿಕಲಚೇತನರಿಗೆ ನೀಡಲಾಗುವ ಯೂನಿಕ್ ಡಿಸೆಬಿಲಿಟಿ ಐಡೆಂಟಿಟಿ ಕಾರ್ಡ್ (ಯು.ಡಿ.ಐ.ಡಿ) ನೀಡಲು ಕೋರಿ ಒಟ್ಟು ಎಷ್ಟು ಅರ್ಜಿಗಳ 31.01.2021ರವರೆಗೆ ಸಲ್ಲಿಕೆಯಾಗಿದೆ;	ವಿಕಲಚೇತನರಿಗೆ ನೀಡಲಾಗುವ ಯೂನಿಕ್ ಡಿಸೆಬಿಲಿಟಿ ಐಡೆಂಟಿಟಿ ಕಾರ್ಡ್ (ಯು.ಡಿ.ಐ.ಡಿ) ಪೋರ್ಟಲ್‌ನಲ್ಲಿ **ದಿನಾಂಕ:31.01.2021ರ** ವರೆಗೆ ಒಟ್ಟು ಸ್ವೀಕೃತವಾಗಿರುವ ಅರ್ಜಿಗಳು ಸಂಖ್ಯೆ:**5,34,847**
ಆ)	ಈ ಅರ್ಜಿಗಳ ಪೈಕಿ ಎಷ್ಟು ಜನರಿಗೆ ಯು.ಡಿ.ಐ.ಡಿ ಕಾರ್ಡ್ ವಿತರಿಸಲಾಗಿದೆ; ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ ಮತ್ತು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು;	• ಈ ಅರ್ಜಿಗಳ ಪೈಕಿ ವಿತರಿಸಲಾಗಿರುವ ಯು.ಡಿ.ಐ.ಡಿ ಕಾರ್ಡ್ ಅರ್ಜಿಗಳ ಸಂಖ್ಯೆ:**2,10,143** • ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ: **29,575** • **40% ಗಿಂತ ಕಡಿಮೆ ಅಂಗವೈಕಲ್ಯತೆ ಇರುವ ಕಾರ್ಡ್‌ಗಳು (white bar UDID card) 1648** • ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ: **2,93,661**
ಇ)	ಯು.ಡಿ.ಐ.ಡಿ ಕಾರ್ಡ್‌ಗಳನ್ನು ಅರ್ಹ ವಿಕಲಚೇತನರಿಗೆ ವಿತರಣೆ ಮಾಡುವಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿ ವಿನಾಕಾರಣ ವಿಳಂಬವಾಗುತ್ತಿದ್ದು, ಅರ್ಹ ವ್ಯಕ್ತಿಗಳ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈ ಯೋಜನೆಯು ಆನ್‌ಲೈನ್ ಮೂಲಕ ಸೇವೆ ಒದಗಿಸುತ್ತಿದ್ದು, ಫಲಾನುಭವಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜಿಲ್ಲಾ/ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಿ ಯು.ಡಿ.ಐಡಿ ಕಾರ್ಡ್ ಪಡೆಯುವುದರಿಂದ ಯಾವುದೇ ಮಧ್ಯವರ್ತಿಗಳ ಹಾವಳಿಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.
ಈ)	ಬಂದಿದ್ದಲ್ಲಿ, ಅಂಗವೈಕಲ್ಯದ ಪ್ರಾಮಾಣೀಕರಣ ಮತ್ತು ಐಡಿ ಕಾರ್ಡ್ ವಿತರಣೆಯಲ್ಲಿ; ಯಾವುದೇ ರೀತಿ ಅಕ್ರಮಗಳು ನಡೆಯದಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರದಿಂದ ಕೈಗೊಳ್ಳುತ್ತಿರುವ ಕ್ರಮಗಳೇನು?	ಅಂಗವೈಕಲ್ಯದ ಪ್ರಾಮಾಣೀಕರಣ ಮತ್ತು ಐಡಿ ಕಾರ್ಡ್ ವಿತರಣೆಯಲ್ಲಿ ಯಾವುದೇ ರೀತಿ ಅಕ್ರಮಗಳು ನಡೆಯದಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರ ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (UDID) ಕಾರ್ಡ್‌ಗಳನ್ನು ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ.

ಸಂಖ್ಯೆ: ಮಮಇ 47 ಪಿಹೆಚ್‌ಪಿ 2022

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು